The Company has engaged the services of NSDL to provide remote e-voting facility to its Members and the communication of assent or dissent of the Members would only take place through the remote e-voting system. The procedure for remote e-voting is detailed in the Notice.

The remote e-voting period commences on **Thursday, November 05, 2026 at 9:00 am IST** and shall end on **Friday, December 04, 2026 at 5:00 pm IST**. The remote e-voting module shall be disabled by NSDL thereafter and the Members will not be allowed to vote electronically beyond the said date and time. Voting rights of the Members shall be in proportion to the shares held by them in the paid-up equity share capital of the Company as on Cut-off date. Once vote on a resolution is cast, the Member will not be able to change it subsequently. Only those Members whose names are recorded in the Register of Members of the Company or in the List of Beneficial Owners as on the Cut-off date will be entitled to cast their votes by remote e-voting. Any person who is not a shareholder as on the cut-off date shall treat the Postal ballot notice for information purposes only.

To facilitate Members to receive this Notice electronically, the Members who have not yet registered/updated their email id, are requested to register/ update their email id in the manner as mentioned below:

a. Members holding shares in physical form are requested to send an email to Company at investors@sarlafibers.com along giving the details of folio no., email address, mobile number, a copy of share certificate and self-attested PAN copy.
b. Members holding shares in dematerialised form are requested to register/update their email id with their respective Depository Participants with whom demat account(s) is maintained. Alternatively, Members may send a request at the email id investors@sarlafibers.com along with scanned copy of the signed request letter providing the email address, mobile number, self-attested PAN copy and Client Master copy.

The Board of Directors have appointed CS Vyoma Desai, Practising Company Secretary, M. No. FCS 11166, COP No. 23010, as the Scrutinizer, for conducting the Postal Ballot, through e voting process, in a fair and transparent manner.

The Scrutinizer will submit her report to the Chairman of the Company (the Chairman) or any other Director authorized by the Chairman, and the results of the voting by Postal Ballot will be announced not later than two working days from the conclusion of the e-voting i.e. **Friday, December 04, 2026 at 5:00 pm IST**. The results of the Postal Ballot shall be declared on or before Tuesday, December 08, 2026 at 5:00 PM. (IST) at the Corporate Office of the Company situated at 304, Arcadia Building, 195, NCPA Marg, Nariman Point, Mumbai – 400021. The results declared along with the Scrutinizer's Report shall be communicated in the manner provided in this Postal Ballot Notice. The said results along with the Scrutinizer's Report would be intimated to BSE Limited and National Stock Exchange of India Limited, where the Equity Shares of the Company are listed. The results will also be uploaded on the Company's website at https://www.sarlafibers.com/ and on the website of NSDL http://www.evoting.nsdl.com/. The resolutions, if passed with requisite majority, the same hall be deemed to have been passed on the last date of remote e-voting i.e. **Friday, December 04, 2026**.

In case of any queries, you may refer the Frequently Asked Questions (FAQs) for 'Shareholders and e-voting User manual or Shareholders available at the download section of www.evoting.nsdl.com or call: 022 - 4886 7000 or send a request to National Securities Depository Limited at evoting@nsdl.com.

For Sarla Performance Fibers Limited
Sd/-
Mustafa Manasawala
Company Secretary & Compliance Officer
Membership No: A76344

Place: Mumbai
Date: November 04, 2026

ಕಡಬ ನ್ಯಾಯಾಲಯಕ್ಕೆ ಮಾಜಿ ನಕ್ಸಲ್ ಮುಂಡಗಾರು ಲತಾ ಹಾಜರು; ವಿಚಾರಣೆ ಬಳಿಕ ಉಪ್ಪಿನಂಗಡಿ ಪೊಲೀಸರ ವಶಕ್ಕೆ

ವಿವಿ ನೆಟ್‌ವರ್ಕ್– ಕಡಬ (ದಕ್ಷಿಣ ಕನ್ನಡ): ಹಲವು ವರ್ಷಗಳ ಕಾಲ ಪಶ್ಚಿಮ ಘಟ್ಟದ ಕಾಡುಗಳಲ್ಲಿ ನಕ್ಸಲ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದ, ಸರಕಾರಕ್ಕೆ ಶರಣಾಗಿರುವ ಪ್ರಮುಖ ಮಾಜಿ ನಕ್ಸಲ್ ನಾಯಕಿ ಮುಂಡಗಾರು ಲತಾ ಅಲಿಯಾಸ್ ಶ್ರೀಲತಾ ಅವರನ್ನು 2018ರ ಪ್ರಕರಣ ಸಂಬಂಧ ಕಡಬ ಸಂಚಾರಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.



2018ರಲ್ಲಿ ನಕ್ಸಲ್ ತಂಡವೊಂದು ಆಹಾರ ಧಾನ್ಯಗಳನ್ನು ಕೇಳಿ ಜನತೆಯಲ್ಲಿ ಭೀತಿಯನ್ನು ಮೂಡಿಸಿದ್ದ ಪ್ರಕರಣದಲ್ಲಿ ಅವರನ್ನು ವಿಚಾರಣೆಗೆ ಉಪ್ಪಿನಂಗಡಿ ಪೊಲೀಸರು ಕಸ್ಟಡಿಗೆ ಪಡೆದುಕೊಂಡು ಮಹಜರು ನಡೆಸಿದರು.

ಮುಂಡಗಾರು ಲತಾ ಅವರನ್ನು ಕಡಬ ನ್ಯಾಯಾಲಯಕ್ಕೆ ಹಾಜರುಪಡಿಸುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಎರಡು ಪೊಲೀಸ್ ವ್ಯಾನ್‌ಗಳು ಸೇರಿದಂತೆ ಆರು ಪೊಲೀಸ್ ವಾಹನಗಳಲ್ಲಿ ಬೆಂಗಳೂರು, ಉಪ್ಪಿನಂಗಡಿ, ಕಡಬ, ಸುಬ್ರಮಣ್ಯ ಹಾಗೂ ಬೆಳ್ತಂಗಡಿ ಪೊಲೀಸ್ ಠಾಣೆಗಳ ಸಿಬ್ಬಂದಿ ಆಗಮಿಸಿದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ ನ್ಯಾಯಾಲಯದ ಆವರಣದಲ್ಲಿ ಬಿಗಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿತ್ತು. ಶರಣಾಗತಿಯ ಬಳಿಕವೂ ಹಳೆಯ ಪ್ರಕರಣಗಳ ತನಿಖಾ ಪ್ರಕ್ರಿಯೆ ಮುಂದುವರಿದಿರುವುದು. ಇದೀಗ ಕಡಬ ತಾಲೂಕಿನ ಶಿರಾಡಿ ಘಟನೆಯ ಮಹಜರು ನಡೆಯಲಿರುವುದು ಸ್ಥಳೀಯವಾಗಿ ಗಮನ ಸೆಳೆದಿದೆ. ಕುಕ್ಕೆ ಸುಬ್ರಹ್ಮಣ್ಯ, ಕುಮಾರ ಪರ್ವತ, ಶಿರಾಡಿ ಘಾಟ್ ಹಾಗೂ ಪಶ್ಚಿಮ ಘಟ್ಟದ ಅರಣ್ಯ ಪ್ರದೇಶಗಳು ಹಿಂದಿನ ನಕ್ಸಲ್ ಚಟುವಟಿಕೆಗಳ ಹಿನ್ನೆಲೆಯಲ್ಲಿ ಮತ್ತೆ ಗಮನ ಸೆಳೆಯುತ್ತಿವೆ. 2018ರಲ್ಲಿ ಶಿರಾಡಿ ಗ್ರಾಮದ ಮಿತ್ತಮಜಲು ನಿವಾಸಿಗಳಾದ ಸುರೇಶ್ ಮತ್ತು ಲೀಲಾ ಅವರ ಮನೆಗೆ ರಾತ್ರಿ ವೇಳೆ ಮುಂಡಗಾರು ಲತಾ ನೇತೃತ್ವದ ನಕ್ಸಲರ ತಂಡ ಆಗಮಿಸಿತ್ತು. ಮನೆಯವರನ್ನು ಬೆದರಿಸಿ ಊಟ ಮಾಡಿದ್ದಲ್ಲದೇ, ಮನೆಯಿಂದ ಅಕ್ಕಿ ಸೇರಿದಂತೆ ಕೆಲವು ಆಹಾರ ಸಾಮಗ್ರಿಗಳನ್ನು ಪಡೆದುಕೊಂಡು ತೆರಳಿತ್ತು ಎನ್ನಲಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ತನಿಖೆಯ ಮುಂದುವರಿದ ಭಾಗವಾಗಿ ಘಟನಾ ಸ್ಥಳದ ಮಹಜರು ನಡೆಸಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಲತಾ ಅವರನ್ನು ಬಿಗಿ ಪೊಲೀಸ್ ಭದ್ರತೆಯಲ್ಲಿ ಉಪ್ಪಿನಂಗಡಿ ಪೊಲೀಸ್ ಠಾಣೆಗೆ ಕರೆತರಲಾಗಿದ್ದು, ಬಳಿಕ ಕಡಬ ಸಂಚಾರಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು.

ನ್ಯಾಯಾಂಗ ಬಂಧನದಲ್ಲಿದ್ದಾನೆ ಶಂಕರ್ ಬನ್ನೂರ್: ಪರೀಕ್ಷಾ ಪ್ರಾಧಿಕಾರಕ್ಕೆ ವರದಿ ನೀಡಿದ ಜಿಲ್ಲಾಧಿಕಾರಿ

ವಿವಿ ನೆಟ್‌ವರ್ಕ್– ಹಾವೇರಿ: ಮೊಬೈಲ್ ಬಳಸಿ ಗ್ರಾಮ ಆಡಳಿತಾಧಿಕಾರಿ ಪರೀಕ್ಷೆ ಬರೆದು ಅಕ್ರಮ ಎಸಗಿದ ಹಾನಗಲ್ ಪಟ್ಟಣದ ಶಂಕರ್ ಬನ್ನೂರ್ ಕೆರಿಮತ್ತಿಹಳ್ಳಿಯಲ್ಲಿರುವ ಕಾರಾಗೃಹದಲ್ಲಿದ್ದಾನೆ. ಇತ್ತ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಕರಣದ ವರದಿಯನ್ನು ನೀಡಿರುವುದಾಗಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಈ ಕುರಿತಂತೆ ಮಾತನಾಡಿದ ಹಾವೇರಿ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ್, "ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಡೈರೆಕ್ಟರ್‌ಗೆ ಎಫ್‌ಐಆರ್ ಆಗಿರುವ ಬಗ್ಗೆ ಮತ್ತು ಸಿಸಿಟಿವಿ ಫೂಟೇಜ್ ನೀಡಿದ್ದೇವೆ. ಶಂಕರ್ ಬನ್ನೂರು ಪರೀಕ್ಷೆಯಲ್ಲಿ ಅಕ್ರಮ ಎಸಗಿರುವ ಪ್ರಕರಣದ ತನಿಖೆ ನಡೆಯುತ್ತಿದೆ. ಅದರ ಪೂರ್ಣ ವಿವರಣೆಯನ್ನು ಕೇಳುತ್ತಿದ್ದೇನೆ. ತನಿಖೆ ನಡೆಯುತ್ತಿದೆ ನೋಡೋಣ ಏನಾಗುತ್ತೆ. ವಿವರಣೆ ಬರುತ್ತಿದ್ದಂತೆ ಎಲ್ಲ ಮಾಹಿತಿಯನ್ನು ಅಪಡೇಟ್ ಮಾಡಲಾಗುವುದು. ಈ ಪ್ರಕರಣದಲ್ಲಿ ಪೊಲೀಸ್ ಇಲಾಖೆಯ ತನಿಖೆ ಮಹತ್ವದಾಗಿದ್ದು, ಆಧುನಿತ ತಂತ್ರಜ್ಞಾನ ಇರುವ ಕಾರಣ ತನಿಖೆ ವಿಳಂಬವಾಗುವುದಿಲ್ಲಾ. ಆದಷ್ಟು ಬೇಗನೆ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆ" ಎಂದು ತಿಳಿಸಿದರು.



ಕಾರಾಗೃಹದಲ್ಲಿ ಅಭ್ಯರ್ಥಿ ಶಂಕರ್ ಬನ್ನೂರು: ರಾಜ್ಯಕ್ಕೆ ಟಾಪರ್ ಎಂದು ಗೊತ್ತಾಗುತ್ತಿದ್ದಂತೆ ಶಂಕರ್ ಸಾಕಷ್ಟು ಆತ್ಮವಿಶ್ವಾಸದಿಂದ ಮಾತನಾಡಿದ್ದ. ತಾನು 45 ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದಿದ್ದೇನೆ. ನನ್ನ ಬುದ್ಧಿಮಟ್ಟದಿಂದ ಪರೀಕ್ಷೆ ಬರೆದಿದ್ದೇನೆ, ನನ್ನ ಮೇಲೆ ತನಿಖೆ ನಡೆದರೆ ಸಹಕರಿಸುವುದಾಗಿ ತಿಳಿಸಿದ್ದ. ಪೊಲೀಸ್ ಅಧಿಕಾರಿಗಳು ಶಂಕರ್ ಬನ್ನೂರು ವಿಚಾರಣೆ ನಡೆಸಿದಾಗ ತಾನು ಮೊಬೈಲ್ ಬಳಕೆ ಮಾಡಿರುವ ವಿಷಯವನ್ನು ಆತ ತಿಳಿಸಿದ್ದಾನೆ ಎನ್ನಲಾಗಿದೆ. ಅಲ್ಲದೇ ತಾನು ತಪ್ಪು ಮಾಡಿರುವುದನ್ನು ಒಪ್ಪಿಕೊಂಡಿರುವುದಾಗಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಈ ಮಧ್ಯೆ ಶಂಕರ್ ಬನ್ನೂರನ್ನು ವಶಕ್ಕೆ ಪಡೆದಿರುವ ಪೊಲೀಸರು ಹಾವೇರಿಯ ಕೆರಿಮತ್ತಿಹಳ್ಳಿಯಲ್ಲಿರುವ ಕಾರಾಗೃಹದಲ್ಲಿ ಇರಿಸಿದ್ದಾರೆ.

"ಸವಣೂರು ಉಪವಿಭಾಗಾಧಿಕಾರಿ ನೀಡಿರುವ ದೂರಿನ್ವಯ ಆರೋಪಿಯನ್ನು ವಶಕ್ಕೆ ಪಡೆದಿದ್ದೇವೆ. ಆರೋಪಿ ಶಂಕರ್ ಬನ್ನೂರನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದೇವೆ. ಆಧುನಿಕ ತಂತ್ರಜ್ಞಾನ ಉಪಯೋಗಿಸಿಕೊಂಡು ತನಿಖೆ ಮಾಡುತ್ತಿದ್ದೇವೆ. ಈ ಹಂತದಲ್ಲಿ ಏನನ್ನು ನಾವು ಹೇಳಲು ಆಗುವುದಿಲ್ಲ. ಈ ಪ್ರಕರಣ ತನಿಖೆಯನ್ನು ಹಾವೇರಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳಗೆ ನೀಡಿದ್ದೇವೆ. ತನಿಖೆ ನಡೆಯುತ್ತಿದೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿ ಮುಂದಿನ ತನಿಖೆ ಕೈಗೊಳ್ಳುತ್ತೇವೆ. ಯಾವ ಯಾವ ಹಂತದಲ್ಲಿ ಏನೇನು ಮಾಡಬೇಕು ಎನ್ನುವ ಕುರಿತಂತೆ ನಾವು ಚೆಕ್ ಲಿಸ್ಟ್ ಮಾಡುತ್ತೇವೆ. ಆರೋಪಿ ಶಂಕರ್ ಪರೀಕ್ಷೆಗೆ ಒಳಗಾಗಿ ಕೊನೆಯ ಘಳಿಗೆಯಲ್ಲಿ ಬ್ಯಾಗ್ ಇಡುವ ನೆಪದಲ್ಲಿ ಮೊಬೈಲ್ ತಗೆದುಕೊಂಡು ಹೋಗಿರಬಹುದು ಎಂಬ ಶಂಕೆಯಿದೆ. ಸಂಪೂರ್ಣ ತನಿಖೆಯಾಗುವವರೆಗೂ ಏನನ್ನು ಹೇಳಲು ಬರುವುದಿಲ್ಲ" ಎಂದು ಎಸ್ಪಿ ಯಶೋಧಾ ವಂಟಗೋಡಿ ಅವರು ಮಾಹಿತಿ ನೀಡಿದ್ದಾರೆ.

ಪ್ರಕರಣದ ಹಿನ್ನೆಲೆ: ಹಾವೇರಿ ಜಿಲ್ಲೆಯ ಹಾನಗಲ್ ಪಟ್ಟಣದ ಶಂಕರ್ ಬನ್ನೂರು ಅಕ್ಟೋಬರ್ 04 ಕೆಇಎ ನಡೆಸಿದ್ದ ವಿಎಒ ಪರೀಕ್ಷೆಯಲ್ಲಿ 151 ಅಂಕಗಳಿಸುವ ಮೂಲಕ ರಾಜ್ಯಕ್ಕೆ ಟಾಪರ್ ಆಗಿದ್ದ. ಈತ ಪೊಲೀಸ್ ಕಾನ್ಸಟೇಬಲ್ ಪರೀಕ್ಷೆಯಲ್ಲಿ ಕೇವಲ 25 ಅಂಕಗಳಿಸಿದ್ದರಿಂದ ಸಂಶಯಗೊಂಡು ಸ್ಥಳೀಯರು ಸಾಮಾಜಿಕ ಜಾಲತಾಣದಲ್ಲಿ ಚರ್ಚೆ ಮಾಡಿದ್ದರು. ಇದರ ಮಧ್ಯೆಯೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಓ ಹಾವೇರಿ ಜಿಲ್ಲಾಧಿಕಾರಿಗೆ ತನಿಖೆ ನಡೆಸುವಂತೆ ಆದೇಶ ನೀಡಿದ್ದರು. ಆದೇಶ ಪ್ರಕಟವಾಗುತ್ತಿದ್ದಂತೆ ಹಾವೇರಿ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ್ ಸವಣೂರು ಉಪವಿಭಾಗಾಧಿಕಾರಿ ಸಮೀಪ್ ಪ್ರಕಾಶ್ ಖೋಡೆ ನೇತೃತ್ವದಲ್ಲಿ ತಂಡ ರಚಿಸಿದ್ದರು. ಸಮೀರ್ ಪ್ರಕಾಶ ಖೋಡೆ ಪರೀಕ್ಷಾ ಕೇಂದ್ರದ ಸಿಸಿಟಿವಿ ಪರಿಶೀಲನೆ ನಡೆಸಿದಾಗ ಅಭ್ಯರ್ಥಿ ಶಂಕರ ಬನ್ನೂರು ಮೊಬೈಲ್‌ನಂತಹ ವಸ್ತು ಪರೀಕ್ಷಾ ಕೇಂದ್ರದ ಒಳಗೆ ತೆಗೆದುಕೊಂಡು ಹೋಗಿರುವ ದೃಶ್ಯ ಪತ್ತೆಯಾಗಿತ್ತು. ಇದರ ಬೆನ್ನಲ್ಲಿಯೇ ಹಾವೇರಿ ಜಿಲ್ಲೆ ಶಿಗ್ಗಾಂವ್ ಪೊಲೀಸ್ ಠಾಣೆಯಲ್ಲಿ ಸವಣೂರು ಉಪವಿಭಾಗಾಧಿಕಾರಿ ಖೋಡೆ ಶಂಕರ ಬನ್ನೂರು ವಿರುದ್ಧ ದೂರು ದಾಖಲಿಸಿದ್ದರು.

ದೂರು ದಾಖಲಾಗುತ್ತಿದ್ದಂತೆ ಪೊಲೀಸರು ಶಂಕರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಅಲ್ಲದೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು ಹಾವೇರಿಯ ಕಾರಾಗೃಹದಲ್ಲಿ ಶಂಕರ್ ಇಡಲಾಗಿದೆ. ಇದೀಗ ವರದಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕಳುಹಿಸಿ ಕೊಟ್ಟಿರುವುದಾಗಿ ಹಾವೇರಿ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ್ ತಿಳಿಸಿದ್ದಾರೆ.

ಗೋಕರ್ಣ ಸಮುದ್ರ ತೀರದಲ್ಲಿ ದುರಂತ:

ಮತ್ತೋರ್ವನ ಶವ ಪತ್ತೆ, ಮೃತರ ಸಂಖ್ಯೆ ಮೂರಕ್ಕೆ ಏರಿಕೆ

ವಿವಿ ನೆಟ್‌ವರ್ಕ್– ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ದುಬ್ಬಣಶಶಿ (ಡಬ್ಬನಶಶಿ) ಬೀಚ್‌ನಲ್ಲಿ ಭಾನುವಾರ ಬೆಳ್ಳಂಬೆಳಗ್ಗೆ ಸಂಭವಿಸಿದ ದುರಂತದಲ್ಲಿ ಕಾಣೆಯಾಗಿದ್ದ ಮತ್ತೋರ್ವನ ಶವ ಪತ್ತೆಯಾಗಿದೆ. ಓರ್ವ ಯುವತಿ ಸೇರಿ ಮೃತಪಟ್ಟವರ ಸಂಖ್ಯೆ ಮೂರಕ್ಕೆ ಏರಿದಂತಾಗಿದೆ.

ಬೆಂಗಳೂರಿನ ಬೆಳ್ಳಂದೂರಿನಲ್ಲಿರುವ ಆಲೋರಿಕಾ ಇಕೋಸ್ಪೇಸ್ ಕಂಪನಿಯ ಉದ್ಯೋಗಿಗಳ ತಂಡ ಪ್ರವಾಸಕ್ಕಾಗಿ ಗೋಕರ್ಣಕ್ಕೆ ಆಗಮಿಸಿತ್ತು. ಗೋಕರ್ಣದ ದುಬ್ಬನಶಸಿ ಕಡಲತೀರದಲ್ಲಿ ಸಮುದ್ರಕ್ಕಿಳಿದು ಸ್ನಾನ ಮಾಡುತ್ತಿದ್ದ ವೇಳೆ ಈ ದುರಂತ ಸಂಭವಿಸಿತ್ತು.



ದುಬ್ಬಣಶಶಿ ಬೀಚ್‌ನಲ್ಲಿರುವ ಕೋಜಿ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ತಂಡದ ಸದಸ್ಯರು, ಭಾನುವಾರ ಬೆಳಗ್ಗೆ ಸಮುದ್ರದಲ್ಲಿ ಸ್ನಾನಕ್ಕೆ ಇಳಿದಿದ್ದರು. ಈ ವೇಳೆ ಏಕಾಏಕಿ ಅಪ್ಪಳಿಸಿದ ಭಾರಿ ಅಲೆಗಳಿಗೆ ಸಿಲುಕಿ ವಿಶ್ವೇಶ್ ಎ.ಕೆ. (24), ಶೋಭಾ ದಾಸ್ (22) ಮತ್ತು ಮೊಹಮ್ಮದ್ ಅಕ್ರಂ (27) ಸೇರಿದಂತೆ 7 ಮಂದಿ ಪ್ರವಾಸಿಗರು ಸಮುದ್ರದಲ್ಲಿ ಕೊಚ್ಚಿಕೊಂಡು ಹೋಗಿದ್ದರು. ಈ ಪೈಕಿ ಶೋಭಾ ದಾಸ್ ಹಾಗೂ ಮೊಹಮ್ಮದ್ ಅಕ್ರಂ ಶವಗಳು ಅಂದೇ ಪತ್ತೆಯಾಗಿದ್ದವು. ಆದರೆ, ವಿಶ್ವೇಶ್ ಅವರ ಶವ ಸೋಮವಾರ ದುಬ್ಬನಶಶಿ ಬೀಚ್ ಸಮೀಪದಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ನಡೆದ ದಿನ ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗೋಕರ್ಣ ಠಾಣೆಯ ಪಿಎಸ್ಐ ಅನಿಲ್ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಡಾ. ಜಗದೀಶ್ ನಾಯ್ಕ ಮತ್ತು ಸಿಬ್ಬಂದಿ ತುರ್ತು ಚಿಕಿತ್ಸೆ ನೀಡಿ ಇಬ್ಬರ ಪ್ರಾಣ ಉಳಿಸಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಕೆಲವರನ್ನು ಕುಮಟಾ ಆಸ್ಪತ್ರೆಗೆ ಕಳುಹಿಸಿರುವ ಬಗ್ಗೆ ಪೊಲೀಸರು ಅಂದೇ ಮಾಹಿತಿ ನೀಡಿದ್ದರು. ಈ ಬಗ್ಗೆ ಗೋಕರ್ಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದಲ್ಲಿ ವಕೀಲರ ಮೇಲಿನ ಹಲ್ಲೆ ಪ್ರಕರಣಗಳ ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಕೀಲರ ಮೇಲೆ ಹತ್ಯೆ ಪ್ರಕರಣಗಳು, ದಾಳಿ ಹಾಗೂ ಬೆದರಿಕೆ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಂಡಿದೆ. ಪ್ರಕರಣ ಸಂಬಂಧ ವಕೀಲರ ಸಂಘದ ಅಧ್ಯಕ್ಷರೂ ಮತ್ತು ಪದಾಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ ಮನವಿಗಳನ್ನು ಪರಿಗಣಿಸಿರುವ ನ್ಯಾಯಮೂರ್ತಿ ಡಿ.ಕೆ. ಸಿಂಗ್ ಹಾಗೂ ನ್ಯಾಯಮೂರ್ತಿ ಎಚ್. ಶಾಂತಿ ಭೂಷಣ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಂಡಿದೆ. ಜೊತೆಗೆ, ರಾಜ್ಯ ಗೃಹ ಕಾರ್ಯದರ್ಶಿ, ಡಿಜಿ – ಐಜಿಪಿ, ಬೆಂಗಳೂರು ನಗರ ಪೊಲೀಸ್ ಆಯುಕ್ತರು, ಭಾರತೀಯ ವಕೀಲರ ಪರಿಷತ್ತು, ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಹಾಗೂ ಬೆಂಗಳೂರು ವಕೀಲರ ಸಂಘಕ್ಕೆ ನೋಟಿಸ್ ಜಾರಿ ಮಾಡಿ ಮುಂದಿನ ವಿಚಾರಣೆಯನ್ನು 2026ರ ಡಿಸೆಂಬರ್ 8ಕ್ಕೆ ನಿಗದಿ ಪಡಿಸಿದೆ. ಪೊಲೀಸ್ ಠಾಣೆಗಳಲ್ಲಿ ಸಿವಿಲ್, ಆಸ್ತಿ ಮತ್ತು ಗುತ್ತಿಗೆ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಈ ಸಂಬಂಧ ಹಿರಿಯ ಅಧಿಕಾರಿಗಳು ಹಲವು ಸುತ್ತೋಲೆಗಳನ್ನು ಹೊರಡಿಸಿದರೂ, ಕೆಳಹಂತದ ಪೊಲೀಸ್ ಅಧಿಕಾರಿಗಳು ಉಲ್ಲಂಘಿಸುತ್ತಿದ್ದಾರೆ.



ಭೂಮಿಯತ್ತ ಅಪ್ಪಳಿಸುತ್ತಿದೆ 1.5 ಟನ್ ತೂಕದ ನಾಸಾದ ಬೃಹತ್ ಟೆಲಿಸ್ಕೋಪ್

ವಿವಿ ನೆಟ್‌ವರ್ಕ್– ಬಾಹ್ಯಾಕಾಶದಲ್ಲಿ ಬರೋಬ್ಬರಿ 22 ವರ್ಷಗಳ ಕಾಲ ಅದ್ಭುತ ಸೇವೆ ಸಲ್ಲಿಸಿದ ನಾಸಾದ ಪ್ರಮುಖ ಉಪಗ್ರಹವೊಂದು ಇದೀಗ ತನ್ನ ಜೀವಿತಾವಧಿ ಮುಗಿಸಿ ಭೂಮಿಯತ್ತ ವಾಪಸ್ಸಾಗುತ್ತಿದೆ. ಕೇವಲ ಎರಡು ವರ್ಷಗಳ ಕಾರ್ಯಾಚರಣೆಗಾಗಿ ಉಡಾವಣೆಗೊಂಡಿದ್ದ ನಾಸಾದ ನೀಲ್ ಗೆಹ್ರೆಲ್ಸ್ ಸ್ವಿಫ್ಟ್ ಅಬ್ಸರ್ವೇಟರಿ ಟೆಲಿಸ್ಕೋಪ್ ಇದೀಗ ಭೂಮಿಗೆ ಅಪ್ಪಳಿಸಲಿದೆ.

ಈ ಬೃಹತ್ ಟೆಲಿಸ್ಕೋಪ್‌ನ ಕೆಲವು ಅವಶೇಷಗಳು ಬೀಳಬಹುದಾದ ಸಂಭಾವ್ಯ ಪ್ರದೇಶಗಳ ಪಟ್ಟಿಯಲ್ಲಿ ಭಾರತದ ಮುಂಬೈ, ಹೈದರಾಬಾದ್ ಹಾಗೂ ಬೆಂಗಳೂರು ನಗರಗಳು ಸೇರಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ನವೆಂಬರ್ 20, 2004ರಂದು ಉಡಾವಣೆಯಾಗಿದ್ದ ಈ ಟೆಲಿಸ್ಕೋಪ್ ಸುಮಾರು 1.5 ಟನ್ ತೂಕವನ್ನ ಹೊಂದಿದೆ. ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ನೀಡಿರುವ ಮಾಹಿತಿಯ ಪ್ರಕಾರ, ನವೆಂಬರ್ 4ರಂದು ಭಾರತೀಯ ಕಾಲಮಾನ ಮಧ್ಯಾಹ್ನ 2ಗಂಟೆ ಸುಮಾರಿಗೆ ಇದು ಭೂಮಿಯ ವಾತಾವರಣವನ್ನ ಪ್ರವೇಶಿಸುವ ನಿರೀಕ್ಷೆಯಿದೆ. ಆದರೆ ಇದರ ಮರುಪ್ರವೇಶಕ್ಕೆ 11 ಗಂಟೆಗಳ ಕಾಲಾವಕಾಶ ಇದೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಭೂಮಿಯ ವಾತಾವರಣವನ್ನ ಪ್ರವೇಶಿಸುತ್ತಿದ್ದಂತೆಯೇ ಘರ್ಷಣೆಯಿಂದಾಗಿ ಈ ಟೆಲಿಸ್ಕೋಪ್‌ನ ಬಹುಪಾಲು ಭಾಗ ಸುಟ್ಟು ಕರಕಲಾಗಲಿದೆ. ಆದರೆ, ಕೆಲವು ಸಣ್ಣಪುಟ್ಟ ಬಿಡಿಭಾಗಗಳು ಸುಟ್ಟುಹೋಗದೆ ಭೂಮಿಯನ್ನ ತಲುಪಬಹುದು. ಮಿಷನ್‌ನ ಮುಖ್ಯ ವಿಜ್ಞಾನಿ ಬ್ರಾಡ್ ಸೆಂಕೊ ಅವರ ಪ್ರಕಾರ, ಆಫ್ರಿಕಾ, ಆಸ್ಟ್ರೇಲಿಯಾ, ಆಗ್ನೇಯ ಏಷ್ಯಾ, ದಕ್ಷಿಣ ಅಮೆರಿಕ ಹಾಗೂ ಭಾರತದ ಕೆಲವು ಭಾಗಗಳು ಈ ಟೆಲಿಸ್ಕೋಪ್‌ನ ಮರುಪ್ರವೇಶದ ವಲಯದಲ್ಲಿವೆ. ಭೂಮಿಯ 20.6 ಡಿಗ್ರಿ ದಕ್ಷಿಣ ಅಕ್ಷಾಂಶ ಮತ್ತು 20.6 ಡಿಗ್ರಿ ಉತ್ತರ ಅಕ್ಷಾಂಶದ ನಡುವೆ ಇದು ಅಪ್ಪಳಿಸಲಿದೆ. ಭಾರತದ ವಿಚಾರಕ್ಕೆ ಬಂದರೆ, ಪಶ್ಚಿಮ ಕರಾವಳಿಯ ದಮನ್‌ನಿಂದ ಪೂರ್ವ ಕರಾವಳಿಯ ಒಡಿಶಾದ ಕಟಕ್ ವರೆಗೆ ಎಳೆಯಬಹುದಾದ ಕಾಲ್ಪನಿಕ ರೇಖೆಯ ದಕ್ಷಿಣ ಭಾಗವು ಈ ವಲಯದಲ್ಲಿ ಬರುತ್ತದೆ. ಹೀಗಾಗಿ, ಮುಂಬೈ, ಹೈದರಾಬಾದ್, ಬೆಂಗಳೂರು ಮತ್ತು ಚೆನ್ನೈ ನಗರಗಳು ಈ ವ್ಯಾಪ್ತಿಯಲ್ಲಿ ಬರುತ್ತವೆ. ದೆಹಲಿ, ಕೋಲ್ಕತ್ತಾ ಸೇರಿದಂತೆ ಉತ್ತರ ಭಾರತವು ಇದರಿಂದ ಹೊರಗಿದೆ. ಆದರೆ, ಈ ಅಕ್ಷಾಂಶ ವಲಯದಲ್ಲಿದ್ದ ಮಾತ್ರಕ್ಕೆ ಟೆಲಿಸ್ಕೋಪ್ ಅವಶೇಷಗಳು ನೇರವಾಗಿ ಈ ನಗರಗಳ ಮೇಲೆಯೇ ಬೀಳುತ್ತವೆ ಎಂದು ಭಯಪಡುವ ಅಗತ್ಯವಿಲ್ಲ.

ಗ್ಲೋಬಲ್ ಇನ್ಫ್ರಾಟೆಕ್ & ಫೈನಾನ್ಸ್ ಲಿಮಿಟೆಡ್

ನೋಂ. ಕಛೇರಿ: F-10-11-12 ಬಿಎಸ್‌ಆರ್ ಆರ್ಕೇಡ್, 198, ಗಾಂಧಿ ಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು - 560 004
ಸಿಐಎನ್: L16299KA1995PLC214634; **ಇಮೇಲ್:** asianlakcfl@gmail.com; **ವೆಬ್‌ಸೈಟ್:** www.globalinfrafin.in

30ನೇ ಸೆಪ್ಟೆಂಬರ್ 2026ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವರ್ಷದ ಲೆಕ್ಕ ಪರಿಶೋಧಿಸದ ಹಣಕಾಸು ಫಲಿತಾಂಶಗಳ ಸಾರಾಂಶ

ರೂ. ಲಕ್ಷಗಳಲ್ಲಿ

ಕ್ರ. ಸಂ.	ವಿವರಗಳು	ಸೆಪ್ಟೆಂಬರ್ 30 2026ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30 2025ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30 2026ಕ್ಕೆ ಕೊನೆಗೊಂಡ ಅರ್ಧ ವರ್ಷ	ಮಾರ್ಚ್ 31, 2026 ಕ್ಕೆ ಕೊನೆಗೊಂಡ ವರ್ಷ
		ಅಪರಿಶೋಧಿತ			ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ (ನಿವ್ವಳ)	2.39	9.94	28.50	151.15
2	ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ / (ನಷ್ಟ), ಅಸಾಧಾರಣ ಮತ್ತು/ಅಥವಾ ಅಸಾಧಾರಣ ವಸ್ತುಗಳು	(14.10)	(0.34)	0.40	(81.42)
3	ತೆರಿಗೆಗೆ ಮುಂಚಿನ ಅವಧಿಗೆ (ಅಸಾಧಾರಣ ಮತ್ತು/ಅಥವಾ ಅಸಾಧಾರಣ ವಸ್ತುಗಳ ನಂತರ) ನಿವ್ವಳ ಲಾಭ / (ನಷ್ಟ)	(14.10)	(0.34)	0.40	(81.42)
4	ತೆರಿಗೆ ನಂತರದ ಅವಧಿಗೆ (ಅಸಾಧಾರಣ ಮತ್ತು/ಅಥವಾ ಅಸಾಧಾರಣ ವಸ್ತುಗಳ ನಂತರ) ನಿವ್ವಳ ಲಾಭ / (ನಷ್ಟ)	(14.10)	(0.34)	0.40	(81.42)
5	ಈ ಅವಧಿಯ ಒಟ್ಟು ಸಮಗ್ರ ಆದಾಯ [ಈ ಅವಧಿಯ ಲಾಭ / (ನಷ್ಟ) (ತೆರಿಗೆ ನಂತರದ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರದ) ಒಳಗೊಂಡಿದೆ]	(14.10)	(0.34)	0.40	(81.42)
6	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ (ತಲಾ ರೂ. 10/- ಮುಖಬೆಲೆ)	141.440	2,624.080	141.440	141.440
7	ಇತರೆ ಇಕ್ವಿಟಿ			1,712.69	1,712.080
8	ಪ್ರತಿ ಷೇರಿಗೆ ಗಳಿಕೆ (ಅಸಾಧಾರಣ ಅಂಶಗಳಿಗೆ ಮೊದಲು) - ತಲಾ ರೂ. 10/- ರಂತೆ (ಮುಂದುವರಿಯುತ್ತಿರುವ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಗೆ)				
(i)	ಎ) ಮೂಲ	(1.00)	(0.00)	0.03	(5.76)
	ಬಿ) ತಗ್ಗಿಸಿದ	(1.00)	(0.00)	0.03	(5.76)

ಟಿಪ್ಪಣಿಗಳು:
1. ಮೇಲಿನ ಮಾಹಿತಿಯು, ಸೆಬಿ LODR ನಿಯಮಾವಳಿಗಳು, 2015 ರ ನಿಯಮ 33 ರ ಅಡಿಯಲ್ಲಿ ಷೇರು ವಿನಿಮಯ ಕೇಂದ್ರ(ಗಳ)ಕ್ಕೆ ಸಲ್ಲಿಸಲಾದ, 30ನೇ ಸೆಪ್ಟೆಂಬರ್ 2026 ಕ್ಕೆ ಕೊನೆಗೊಂಡ ತ್ರೈಮಾಸಿಕದ 'ಪ್ರತ್ಯೇಕ ಲೆಕ್ಕ ಪರಿಶೋಧಿಸದ ಹಣಕಾಸು ಫಲಿತಾಂಶಗಳ' ವಿವರವಾದ ಸ್ವರೂಪದ ಒಂದು ಸಾರಾಂಶವಾಗಿದೆ. 30ನೇ ಸೆಪ್ಟೆಂಬರ್ 2026 ಕ್ಕೆ ಕೊನೆಗೊಂಡ ತ್ರೈಮಾಸಿಕದ ಲೆಕ್ಕ ಪರಿಶೋಧಿಸದ ಫಲಿತಾಂಶಗಳ ಸಂಪೂರ್ಣ ವಿವರಗಳು ಕಂಪನಿಯ ವೆಬ್‌ಸೈಟ್ "globalinfrafin.com" ನಲ್ಲಿ ಹಾಗೂ ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್ www.bseindia.com ನಲ್ಲಿ ಲಭ್ಯವಿವೆ.

ಗ್ಲೋಬಲ್ ಇನ್ಫ್ರಾಟೆಕ್ & ಫೈನಾನ್ಸ್ ಲಿಮಿಟೆಡ್ ಪರವಾಗಿ
ಸಹಿ/-
ವಿ ಎಸ್ ಅಮರನಾಥ್
ಡಿಐಎನ್: 07642585
ವ್ಯವಸ್ಥಾಪಕ ನಿರ್ದೇಶಕ

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 4, 2026

ಮನಿಬಾಕ್ಸ್ ಫೈನಾನ್ಸ್ ಲಿಮಿಟೆಡ್

MONEYBOXX

ಕಾರ್ಪೊರೇಟ್ ಕಚೇರಿ: ಕಟ್ಟಡ ಸಂಖ್ಯೆ 8, ಟವರ್ ಎ, 4ನೇ ಮಹಡಿ, ಡಿಎಲ್‌ಎಫ್ ಸೈಬರ್ ಸಿಟಿ, ಗುರುಗ್ರಾಮ್, ಹರಿಯಾಣ 122002 ಮೊಬೈಲ್ - +91 9650083409

ಡಿಮ್ಯಾಂಡ್ ಸೂಚನೆ

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆಯ ಸೆಕ್ಷನ್ 13(2) ರ ಅಡಿಯಲ್ಲಿ ಸೂಚನೆ, 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3 ರೊಂದಿಗೆ ಓದಿ.

ಮನಿಬಾಕ್ಸ್ ಫೈನಾನ್ಸ್ ಲಿಮಿಟೆಡ್‌ನಿಂದ ಹಣಕಾಸಿನ ನೆರವು ಪಡೆದಿರುವ ಈ ಕೆಳಗಿನ ಸಾಲಗಾರರು/ರು/ಸಹ-ಸಾಲಗಾರರು/ಗಳು ಮನಿಬಾಕ್ಸ್ ಫೈನಾನ್ಸ್ ಲಿಮಿಟೆಡ್‌ಗೆ ತಮ್ಮ ಸಾಲದ ಸಮಾನ ಮಾಸಿಕ ಕಂತುಗಳನ್ನು (EMIs) ಪಾವತಿಸಲು ವಿಫಲರಾಗಿದ್ದಾರೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಅವರ ಸಾಲದ ಖಾತೆಯನ್ನು ಕಾರ್ಯನಿರ್ವಹಿಸದ ಆಸ್ತಿ ಎಂದು ವರ್ಗೀಕರಿಸಲಾಗಿದೆ ಎಂದು ಇಲ್ಲಿ ಸೂಚನೆ ನೀಡಲಾಗಿದೆ. ಸಾಲಗಾರರು/ಗಳು ಮನಿಬಾಕ್ಸ್ ಫೈನಾನ್ಸ್ ಲಿಮಿಟೆಡ್‌ಗೆ ಸ್ಥಿರ ಆಸ್ತಿ/ಗಳ ಭದ್ರತೆಯನ್ನು ಒದಗಿಸಿದ್ದಾರೆ, ಅದರ ವಿವರಗಳನ್ನು ಕೆಳಗೆ ವಿವರಿಸಲಾಗಿದೆ.
ಸಾಲದ ವಿವರಗಳು ಮತ್ತು ಸಾಲಗಾರರು ಮನಿಬಾಕ್ಸ್ ಫೈನಾನ್ಸ್ ಲಿಮಿಟೆಡ್ ಗೆ ದಿನಾಂಕದಂದು ಬಾಕಿ ಇರುವ ಮತ್ತು ಪಾವತಿಸಬೇಕಾದ ಮೊತ್ತವನ್ನು ಸಹ ಕೆಳಗೆ ಸೂಚಿಸಲಾಗಿದೆ. ಪರಿಣಾಮವಾಗಿ, ಕೆಳಗೆ ಸಹಿ ಮಾಡಿರುವವರು ಮನಿಬಾಕ್ಸ್ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು ಕಾಯ್ದೆಯಡಿಯಲ್ಲಿ ಮತ್ತು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002 ರ 13(2) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3 ರೊಂದಿಗೆ ಓದಲಾಗಿದೆ, ಇಲ್ಲಿ ಉಲ್ಲೇಖಿಸಲಾದ ದಿನಾಂಕದಂದು ಸಾಲಗಾರರು/ರು ಮತ್ತು ಸಹ-ಸಾಲಗಾರರು/ರುಗಳಿಗೆ ತಗಾದೆ ಸೂಚನೆಯನ್ನು ನೀಡಲಾಗಿದೆ ಮತ್ತು ತಗಾದೆ ಸೂಚನೆಯ ಪರಿಣಾಮಕಾರಿ ಸೇವೆಯನ್ನು ಖಚಿತಪಡಿಸಿಕೊಳ್ಳಲು, ಈ ಪ್ರಕಟಣೆಯ ಮೂಲಕ ಸೇವೆಯನ್ನು ಪರಿಣಾಮಕಾರಿಯಾಗಿ ಮಾಡಲಾಗಿದೆ. ಈ ಸೂಚನೆಯ 60 (ಅರವತ್ತು) ದಿನಗಳ ಒಳಗೆ ಈ ಕೆಳಗಿನ ಸಾಲಗಾರರು ತಮ್ಮ ಹೆಸರಿನ ಮುಂದೆ ಸೂಚಿಸಲಾದ ಬಾಕಿಗಳನ್ನು ಮರುಪಾವತಿಸಲು ವಿಫಲವಾದರೆ, ಕೆಳಗೆ ಸಹಿ ಮಾಡಿದವರು ಸರ್ಫೇಸಿ ಕಾಯ್ದೆಯ ಸೆಕ್ಷನ್ 13 ರ ಉಪವಿಭಾಗ (4) ರ ಅಡಿಯಲ್ಲಿ ಸುರಕ್ಷಿತ ಸಾಲಗಾರರಿಗೆ ನೀಡಲಾದ ಯಾವುದೇ ಒಂದು ಅಥವಾ ಹೆಚ್ಚಿನ ಅಧಿಕಾರಗಳನ್ನು ಚಲಾಯಿಸುತ್ತಾರೆ, ಇದರಲ್ಲಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಮಾರಾಟ ಮಾಡುವ ಅಧಿಕಾರವೂ ಸೇರಿದೆ. ಕೆಳಗೆ ವಿವರಿಸಿದ ಆಸ್ತಿಗಳೊಂದಿಗೆ ವ್ಯವಹರಿಸದಂತೆ ಸಾರ್ವಜನಿಕರಿಗೆ ಸೂಚಿಸಲಾಗಿದೆ ಮತ್ತು ಇದಲ್ಲದೆ, ಈ ಕಾಯ್ದೆಯ ಸೆಕ್ಷನ್ 13 (13) ರ ಅಡಿಯಲ್ಲಿ ನೀವು ಮಾರಾಟ/ಗುತ್ತಿಗೆ ಅಥವಾ ಬೇರೆ ರೀತಿಯಲ್ಲಿ ಸದರಿ ಸುರಕ್ಷಿತ ಆಸ್ತಿಯನ್ನು ವರ್ಗಾಯಿಸುವುದನ್ನು ನಿಷೇಧಿಸಲಾಗಿದೆ.

ಕ್ರ. ಸಂ.	ಸಾಲಗಾರರ ಹೆಸರು/ಸಹ-ಸಾಲಗಾರರು/ ಸಾಲ ಖಾತೆ ಸಂಖ್ಯೆ / ಶಾಖೆ	ಡಿಮ್ಯಾಂಡ್ ನೋಟಿಸ್ ದಿನಾಂಕ ಮತ್ತು ಮೊತ್ತ	ಭದ್ರತಾ ಸ್ವತ್ತುಗಳ ವಿವರ (ಸ್ಥಿರ ಆಸ್ತಿ/ಗಳು)
1.	2340005034/ಶಾಖೆ: ಮೈಸೂರು **1. ರೂಪ ಮರಿಯಪ್ಪ C/O ಜಿ ಎಸ್ ಮರಿಯಪ್ಪ (ಸಾಲಗಾರ)** **2. ಭಾಗ್ಯ C/O ಜಿ ಎಸ್ ಮರಿಯಪ್ಪ (ಸಹ-ಸಾಲಗಾರ)** **3. ವಿಜಯ್ ಸಂದೀಪ್ C/O ಶ್ರೀಧರ್ ಆಚಾರ್ (ಸಹ-ಸಾಲಗಾರ)** **ವಿಳಾಸ 1:** ರಾಜ್ ನಿಲಯ #102 1ನೇ ಮಹಡಿ ಎಸ್‌ಬಿಐ ಕಾಲೋನಿ ದೇವರಚಿಕ್ಕನಹಳ್ಳಿ, ರಾಯಲ್ ಶೆಲ್ಟರ್ ಹತ್ತಿರ, ಇಂದಿರಾ ಕ್ಯಾಂಟೀನ್ ಹಿಂಭಾಗ, ಬೆಂಗಳೂರು ದಕ್ಷಿಣ, ಬೆಂಗಳೂರು, ಕರ್ನಾಟಕ ಪಿನ್- 560076 **ವಿಳಾಸ 2:** 1345 3ನೇ ಬ್ಲಾಕ್ 15ನೇ ಕ್ರಾಸ್ ವಿಶ್ವಪ್ರಿಯ ಲೇಔಟ್ ಕೊಟ್ಟೂರೇಶ್ವರ ಹೋಮಿಯೋಪತಿ ಕ್ಲಿನಿಕ್ ಹತ್ತಿರ, ಬೇಗೂರು ರಸ್ತೆ, ಬೆಂಗಳೂರು ದಕ್ಷಿಣ ಬೆಂಗಳೂರು ಕರ್ನಾಟಕ 560068 **ವಿಳಾಸ 3:** 18 ಮಾತೃ ದೇವೋ ನಿಲಯ ಎಸ್‌ಎಫ್ 201 11ನೇ ಮುಖ್ಯ ಎಂ ಎಲ್ ಎ ಲೇಔಟ್ ಹೊನಗಸಂದ್ರದಿಂದ ದೇವರಚಿಕ್ಕನಹಳ್ಳಿಗೆ ಅಂಚೆ: ಬೊಮ್ಮನಹಳ್ಳಿ, ಉಪ ಜಿಲ್ಲೆ: ಬೆಂಗಳೂರು ದಕ್ಷಿಣ, ಜಿಲ್ಲೆ ಬೆಂಗಳೂರು, ಕರ್ನಾಟಕ ಪಿನ್ 5600768	**26.10.2026 & ರೂ.29,00,315/-** --- **ಎನ್ ಪಿ ಎ ದಿನಾಂಕ** --- **04.10.2026**	ವಸತಿ ಕಟ್ಟಡ ಬೇರಿಂಗ್ ಸಂಖ್ಯೆ 96, ಹಳೆಯ 96, ಪಿಐಡಿ ಸಂಖ್ಯೆ 60-4-630-96 ಮತ್ತು ಮೌಲ್ಯಮಾಪನ ಸಂಖ್ಯೆ 96 ವಾರ್ಡ್ ಸಂಖ್ಯೆ 60, 2ನೇ ಹಂತ 1ನೇ ಹಂತದಲ್ಲಿದೆ. ಗಾಯತ್ರಿಪುರಂ ನಜಬಾದ್ ಮೊಹಲ್ಲಾ, ಮೈಸೂರು ಪಟ್ಟಣ, ಮೈಸೂರು ತಾಲ್ಲೂಕು, ಜಿಲ್ಲೆ ಮೈಸೂರು, ಆಸ್ತಿ ಸಂಖ್ಯೆ 15220014754500456, ಕರ್ನಾಟಕ ಪಿನ್ ಕೋಡ್: 570010. ಪೂರ್ವ-ಪಶ್ಚಿಮಕ್ಕೆ ವಿಸ್ತೀರ್ಣ ಅಳತೆ: 126.35 ಮೀಟರ್, ಉತ್ತರ-ದಕ್ಷಿಣ: 12.19 ಮೀಟರ್, ಒಟ್ಟು ಸೈಟ್ ವಿಸ್ತೀರ್ಣ: 126.35 ಚದರ ಮೀಟರ್‌ಗಳು, ಒಟ್ಟು ಕಟ್ಟಡ ವಿಸ್ತೀರ್ಣ: 78.96755 ಚದರ ಮೀಟರ್ [ವಿಸ್ತೀರ್ಣ ರಷ್ಟು ಪ್ರತಿ ಮೌಲ್ಯಮಾಪನ - ಪೂರ್ವದಿಂದ ಪಶ್ಚಿಮಕ್ಕೆ: (20.6+28.6)/2 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ ಒಟ್ಟು 34.6 ಮೀಟರ್ ಅಳತೆ 79.0746 ಚದರ ಮೀಟರ್]. ಗಡಿಗಳು: ಮೌಲ್ಯಮಾಪನ/ ಮಾರಾಟ ಒಪ್ಪಂದದ ಪ್ರಕಾರ: ಪೂರ್ವ ಭಾಗ: ರಸ್ತೆ /ಮಂಚಯ್ಯನ ಮನೆ, ಪಶ್ಚಿಮ ಭಾಗ: ಸೈಟ್ ಸಂಖ್ಯೆ 109 /ದೇವಮ್ಮನ ಮನೆ, ಉತ್ತರ ಭಾಗ: ಸೈಟ್ ಸಂಖ್ಯೆ ಡಿ/ರಸ್ತೆ ದಕ್ಷಿಣ ಭಾಗ: ರಸ್ತೆ/ಅಜ್ಜಿಯ ಮನೆ

ಸ್ಥಳ: ಮೈಸೂರು **ದಿನಾಂಕ:** 05.11.2026 ಸಹಿ/- ಅಧಿಕೃತ ಅಧಿಕಾರಿ, **ಮನಿಬಾಕ್ಸ್ ಫೈನಾನ್ಸ್ ಲಿಮಿಟೆಡ್**

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್

ನೋಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ: ಅಗರ ಗ್ರಾಮದ ಸರ್ವೆ ಸಂಖ್ಯೆ 28/P16 ಮತ್ತು ಬಿ.ಎಮ್ ಕಾವಲ್ ಗ್ರಾಮದ ಸರ್ವೆ ಸಂಖ್ಯೆ 85/P6, ಕೆಂಗೇರಿ ಹೋಬಳಿ, ಬೆಂಗಳೂರು 560 082, ಕರ್ನಾಟಕ, ಭಾರತ
ಜಾಲತಾಣ: **www.sjsindia.com** | ಇಮೇಲ್: **compliance@sjsindia.com** | ದೂರವಾಣಿ : **+91 80 6194 0777** | CIN: **L51909KA2005PLC036601**

30ನೇ ಸೆಪ್ಟೆಂಬರ್ 2026ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ಅರ್ಧ ವರ್ಷಕ್ಕೆ ಪರಿಷ್ಕರಿಸಿರದ ಸಂಯೋಜಿತ ಆರ್ಥಿಕ ಫಲಿತಾಂಶಗಳ ಸಾರ

(ಪ್ರತಿ ಷೇರಿನ ಡೇಟಾವನ್ನು ಹೊರತುಪಡಿಸಿ ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ			ಅರ್ಧ ವರ್ಷದ ಕೊನೆಗೊಂಡಾಗ		ವರ್ಷ ಮುಗಿದಾಗ
		30.09.2026	30.06.2026	30.09.2025	30.09.2026	30.09.2025	31.03.2026
		ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಪರಿಶೋಧಿಸ ಲಾಗಿದೆ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	2827.28	2609.98	2417.57	5437.26	4514.15	9550.68
2	ನಿವ್ವಳ ಲಾಭ ಅವಧಿಗೆ (ತೆರಿಗೆ ಅಸಾಧಾರಣ ವಸ್ತುಗಳ ಮೊದಲು)	782.03	676.46	580.46	1458.49	1039.83	2300.91
3	ನಿವ್ವಳ ಲಾಭ ತೆರಿಗೆಗೆ ಮುಂಚಿನ ಅವಧಿಗೆ (ಅಸಾಧಾರಣ ವಸ್ತುಗಳ ನಂತರ)	782.03	956.00	580.46	1738.03	1039.83	2300.91
4	ತೆರಿಗೆಯ ನಂತರ ಹಾಗೂ ಅಪವಾದಾತ್ಮರ (ಅನಾಧಾರಣ) ಐಟಮ್ಗಳ ನಂತರದ ಅವಧಿಗಾಗಿ ನಿವ್ವಳ ಲಾಭ	583.25	744.21	432.69	1327.46	778.85	1717.96
5	ಅವಧಿಗೆ ಒಟ್ಟು ಸಮಗ್ರ ಆದಾಯ ಅವಧಿಯ ಲಾಭ [(ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	575.83	747.59	437.43	1323.42	774.63	1731.49
6	ಇಕ್ವಿಟಿ ಶೇರ್ ಕ್ಯಾಪಿಟಲ್ (ತಲಾ - ರೂ.10/- ರ ಮುಖ ಬೆಲೆ)	322.50	320.05	313.87	322.50	313.87	319.97
7	ಇತರ ಇಕ್ವಿಟಿ	--	--	--	--	--	8358.80
8	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 10/- ರಂತೆ)	ವಾರ್ಷಿಕ ಗೊಳಿಸಲಾಗಿಲ್ಲ	ವಾರ್ಷಿಕ ಗೊಳಿಸಲಾಗಿಲ್ಲ	ವಾರ್ಷಿಕ ಗೊಳಿಸಲಾಗಿಲ್ಲ	ವಾರ್ಷಿಕ ಗೊಳಿಸಲಾಗಿಲ್ಲ	ವಾರ್ಷಿಕ ಗೊಳಿಸಲಾಗಿಲ್ಲ	ವಾರ್ಷಿಕ ಗೊಳಿಸಲಾಗಿದೆ
	1. ಬೇಸಿಕ್ (ವಾರ್ಷಿಕಗೊಳಿಸಲಾಗಿಲ್ಲ)	18.08	23.18	13.73	41.26	24.76	54.02
	2. ಡೈಲ್ಯೂಟೆಡ್ (ವಾರ್ಷಿಕಗೊಳಿಸಲಾಗಿಲ್ಲ)	17.91	22.70	13.32	40.61	24.06	53.06

ಟಿಪ್ಪಣಿಗಳು
1. ಕಂಪನಿಯ ಪ್ರಮುಖ ಸ್ವತಂತ್ರ ಹಣಕಾಸು ಮಾಹಿತಿಯನ್ನು ಕೆಳಗೆ ನೀಡಲಾಗಿದೆ: (ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ			ಅರ್ಧ ವರ್ಷದ ಕೊನೆಗೊಂಡಾಗ		ವರ್ಷ ಮುಗಿದಾಗ
		30.09.2026	30.06.2026	30.09.2025	30.09.2026	30.09.2025	31.03.2026
		ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಪರಿಶೋಧಿಸಲಾಗಿದೆ
1	ಒಟ್ಟು ಆದಾಯ / ಕಾರ್ಯಾಚರಣೆಗಳಿಂದ ಆದಾಯ	1579.35	1455.32	1453.06	3034.67	2690.28	5647.39
2	ತೆರಿಗೆಗೆ ಮುಂಚಿನ ಲಾಭ	533.65	757.08	434.04	1290.73	799.29	1753.84
3	ತೆರಿಗೆಯ ನಂತರದ ಲಾಭ	397.71	597.39	323.19	995.10	596.32	1319.71
4	ಒಟ್ಟು ಸಮಗ್ರ ಆದಾಯ	389.93	599.75	327.70	989.68	593.89	1329.17

2. 30 ಸೆಪ್ಟೆಂಬರ್ 2025ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ಅರ್ಧವರ್ಷದ ಸಲುವಾಗಿ ಪರಿಷ್ಕರಿಸಿರದ ಈ ಮೇಲಿನ ಸಂಯೋಜಿತ ಮತ್ತು ಸ್ವತಂತ್ರ ಆರ್ಥಿಕ ಫಲಿತಾಂಶಗಳು ಆಡಿಟ್ ಕಮಿಟಿಯಿಂದ ಪುನರಾವಲೋಕನ ಮಾಡಲ್ಪಟ್ಟಿದೆ ಮತ್ತು ಆ ಬಳಿಕ ನಿರ್ದೇಶಕರ ಮಂಡಳಿಯಿಂದ ನವೆಂಬರ್ 04, 2026 ರಂದು ಜರುಗಿದ ಅವರ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿದೆ.
3. ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಗಳಿಗೆ ಸಲ್ಲಿಸಲಾದ ಪರಿಶೋಧಿಸಿರದ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳ ಸಾರ ಮೇಲೆ ನೀಡಲಾಗಿದೆ. ವಿವರವಾದ ಲೆಕ್ಕಪರಿಶೋಧನೆಯಿಲ್ಲದ ತ್ರೈ ಮಾಸಿಕ ಹಣಕಾಸು ಫಲಿತಾಂಶಗಳು ಬಿಎಸ್‌ಇ ಲಿಮಿಟೆಡ್ ವೆಬ್‌ಸೈಟ್ **www.bseindia.com** ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ವೆಬ್ ಸೈಟ್ **www.nseindia.com** ನಲ್ಲಿ ಮತ್ತು ಕಂಪನಿಯ ವೆಬ್‌ಸೈಟ್ **www.sjsindia.com** ನಲ್ಲಿಯೂ ಲಭ್ಯವಿದೆ.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಕೆ ಎ ಜೋಸೆಫ್
ಮ್ಯಾನೇಜಿಂಗ್ ಡೈರೆಕ್ಟರ್
ಡಿಐಎನ್: 00784084

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 04, 2026

Bandhan Bank

ಪ್ರಾದೇಶಿಕ ಕಛೇರಿ: ನೇತಾಜಿ ಮಾರ್ಗ, ಮಿತಾಖಲಿ ಆರು ರಸ್ತೆ ಹತ್ತಿರ, ಎಲ್ಲಿಸ್ಬ್ರಿಡ್ಜ್, ಅಹಮದಾಬಾದ್-6. ದೂರವಾಣಿ: +91-26421671-75

ಸಾಲಗಾರರಿಗೆ ಡಿಮ್ಯಾಂಡ್ ನೋಟಿಸ್

ಕೆಳಗೆ ಉಲ್ಲೇಖಿಸಲಾದ ಖಾತೆಯು ಎನ್‌ಪಿಎ ಆಗಿ ಮಾರ್ಪಟ್ಟಿದ್ದು ಮತ್ತು ಬಂಧನ್ ಬ್ಯಾಂಕ್ ಲಿಮಿಟೆಡ್, 2002 ರ ಸೆಕ್ಯುರಿಟೈಸೇಶನ್ ಮತ್ತು ಹಣಕಾಸು ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ (ಆಕ್ಟ್), 2002 ರ ಸೆಕ್ಷನ್ 13(2) ರ ಅಡಿಯಲ್ಲಿ ಈ ಕೆಳಗಿನ ಸಾಲಗಾರರಿಗೆ ನೀಡಿದ ಡಿಮ್ಯಾಂಡ್ ನೋಟಿಸ್ ತಲುಪದೆ ಹಿಂತಿರುಗಿಸಲಾಗಿದೆ. ಆದ್ದರಿಂದ, ಈ ಸೂಚನೆಯನ್ನು ನಿಮಗೆಲ್ಲರಿಗೂ ಮತ್ತು ಸಾರ್ವಜನಿಕರಿಗೆ ಪ್ರಕಟಣೆಯ ಮೂಲಕ ನೀಡಲಾಗಿದೆ.

ಸಾಲಗಾರರ, ಜಾಮೀನುದಾರರ ಹೆಸರು ಮತ್ತು ಸಾಲದ ಖಾತೆ ಸಂಖ್ಯೆ	ಅಡಮಾನ ಇಟ್ಟ ಆಸ್ತಿಯ ವಿವರಣೆ (ಭದ್ರತಾ ಆಸ್ತಿ)	ಡಿಮ್ಯಾಂಡ್ ನೋಟಿಸ್ / ದಿನಾಂಕ/NPA ದಿನಾಂಕ	ಡಿಮ್ಯಾಂಡ್ ನೋಟಿಸ್ ದಿನಾಂಕ ದಂದು ಬಾಕಿ ಮೊತ್ತ	ಸೂಚನೆ ಅಂಟಿಸುವ ದಿನಾಂಕ
1. ಪುಟ್ಟಸ್ವಾಮಿ ಎಸ್ - ಸಾಲಗಾರ 2. ಭಾರತಿ ಪಿ - ಸಹ-ಸಾಲಗಾರರು 1 ಮತ್ತು ಅಡಮಾನದಾರರು 3. ನಾಗರಾಜು ಪಿ - ಸಹ-ಸಾಲಗಾರರು 2 20009160000243	ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಮಂಡ್ಯ ಪುರಸಭೆ ಖಾತಾ ಸಂಖ್ಯೆ D3/3355/KL 926. ಇದು ಮಂಡ್ಯ-571401 ಕಲ್ಲಹಳ್ಳಿ, ವಿ.ವಿ. ನಗರ, 20ನೇ ಕ್ರಾಸ್‌ನಲ್ಲಿದ್ದು, ಪೂರ್ವ-ಪಶ್ಚಿಮಕ್ಕೆ 35 ಅಡಿ ಮತ್ತು ಉತ್ತರ-ದಕ್ಷಿಣಕ್ಕೆ 40 ಅಡಿ ಅಳತೆಯನ್ನು ಹೊಂದಿದೆ. ಆರ್‌ಸಿಸಿ ನಿರ್ಮಾಣದ ವಸತಿ ಕಟ್ಟಡವಿದ್ದು, ಒಟ್ಟು ವಿಸ್ತೀರ್ಣ 1400 ಚದರ ಅಡಿಗಳು. ಈ ಆಸ್ತಿ ಭಾರತಿ ಪಿ. ಅವರಿಗೆ ಸೇರಿದ್ದು, ಗಡಿಗಳು: ಉತ್ತರಕ್ಕೆ: ನಿವೇಶನ ಸಂಖ್ಯೆ 33-ಲಿಂಗರಾಜು ಅವರ ಮನೆ, ಪೂರ್ವಕ್ಕೆ: ನಿವೇಶನ ಸಂಖ್ಯೆ 47, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 49 ಮತ್ತು ದಕ್ಷಿಣಕ್ಕೆ: ರಸ್ತೆ.	12 ಸೆಪ್ಟೆಂಬರ್ 2026/ 30 ಮೇ 2025	ರೂ. 11,38,728.17/-	23 ಅಕ್ಟೋಬರ್ 2026

ಈ ನೋಟಿಸ್ ಮೂಲಕ ನಿಮ್ಮ ವಿರುದ್ಧ ಮಾಡಲಾದ ಡಿಮ್ಯಾಂಡ್ ಏನೆಂದರೆ, ಈ ದಿನಾಂಕದಿಂದ 60 ದಿನಗಳ ಒಳಗೆ ಬ್ಯಾಂಕಿಗೆ ಬಾಕಿ ಹಣವನ್ನು ಬಡ್ಡಿ, ವೆಚ್ಚಗಳು ಮತ್ತು ಶುಲ್ಕಗಳೊಂದಿಗೆ ಮರುಪಾವತಿಸಬೇಕು, ಇಲ್ಲದಿದ್ದರೆ ಬ್ಯಾಂಕ್ ಸರ್ಫೇಸಿ ಕಾಯ್ದೆಯ ಸೆಕ್ಷನ್ 13(4) ರ ಅಡಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಕಾಯ್ದೆಯ ಸೆಕ್ಷನ್ 13 ರ ಉಪ-ವಿಭಾಗ (8) ರ ನಿಬಂಧನೆಗಳನ್ನು ಸಾಲಗಾರರು/ಅಡಮಾನದಾರರ ಗಮನಕ್ಕೆ ತರಲಾಗಿದೆ.

ಸ್ಥಳ: ಮಂಡ್ಯ, ದಿನಾಂಕ: 05 ನವೆಂಬರ್ 2026 **ಅಧಿಕೃತ ಅಧಿಕಾರಿ, ಬಂಧನ್ ಬ್ಯಾಂಕ್ ಲಿಮಿಟೆಡ್**